**INDIAN JOURNAL OF HISTORY AND ARCHAEOLOGY**
**ISSN (e):2582-225X www.ijha.in**
**Vol-5, Issue -6, November-December, 2023,**
**PageNo,43-50**
**Peer -Reviewed, Refereed Journal**

# ತೀರ್ಥಹಳ್ಳಿ ತಾಲೂಕು ಪ್ರದೇಶದ ಶಾಸನಗಳ ಹಿನ್ನೆಲೆಯಲ್ಲಿ ವಿಜಯನಗರದ ಅರಸರ ರಾಜಕೀಯ ಇತಿಹಾಸ ಮತ್ತು ಆಡಳಿತ –ಒಂದು ಅವಲೋಕನ

**ಮೋಹನಕುಮಾರ.ಬಿ.ಸಿ.**[1]

ಪ್ರತಿಯೊಂದು ಪುರಾತತ್ವೀಯ ಅಧ್ಯಯನದಲ್ಲಿ ಪ್ರಾಕ್ತನ ಮೂಲ ಆಧಾರಗಳು ಬಹುಮುಖ್ಯವಾಗಿರುತ್ತವೆ. ಅವುಗಳಲ್ಲಿ ಶಾಸನ ಆಧಾರಗಳು ಸಹ ಪ್ರಧಾನವಾಗಿರುತ್ತವೆ. ಈ ಆಧಾರದ ಮೇಲೆ ಪ್ರಸ್ತುತ ಅಧ್ಯಯನದ ಪ್ರಧಾನ ವಸ್ತುವಿಷಯವೇ ತೀರ್ಥಹಳ್ಳಿ ತಾಲೂಕು ಪ್ರದೇಶದ ವಿಜಯನಗರದ ಅರಸರ ರಾಜಕೀಯ ಇತಿಹಾಸವನ್ನು ಕಟ್ಟಿಕೊಟ್ಟಿರುವಂತಹ ಅಂಶಗಳನ್ನು ಈ ಮುಂದಿನಂತೆಯೇ ಸ್ಥೂಲವಾಗಿಯೇ ಪ್ರಸ್ತುತಪಡಿಸಲಾಗಿರುತ್ತದೆ.

ಒಂದು ಸೀಮಿತ ಭೂ ಭಾಗದ ಅಥವಾ ಪ್ರದೇಶದ ರಾಜಕೀಯ ಇತಿಹಾಸದ ರಚನೆಯು ಒಂದು ರಾಜ್ಯ ಅಥವಾ ಸಾಮ್ರಾಜ್ಯದ ಇತಿಹಾಸದ ರಚನೆಗಿಂತ ಅತ್ಯಂತ ಕಷ್ಟಕರವಾಗಿರುವಂತಹದು. ಏಕೆಂದರೆ, ಒಂದು ಪ್ರದೇಶದ ಇತಿಹಾಸ ರಚನೆ ಮಾಡುವ ನಿಟ್ಟಿನಲ್ಲಿ ಆ ಪ್ರದೇಶವು ಒಂದು ಸಾಮ್ರಾಜ್ಯದ ಸ್ವಲ್ಪ ಭೂ ಭಾಗ ಮಾತ್ರವೇ ಆಗಿರುತ್ತದೆ. ಪ್ರತಿಯೊಂದು ಸಾಮ್ರಾಜ್ಯ ಅಥವಾ ಆ ಸಾಮ್ರಾಜ್ಯದ ಪ್ರತಿಯೊಬ್ಬ ರಾಜನ ರಾಜಕೀಯ ಏಳು ಬೀಳುಗಳನ್ನು ದಾಖಲಿಸುವ ಪ್ರಯತ್ನದಲ್ಲಿ ಸಾಕಷ್ಟು ಪುರಾವೆಗಳ ಕೊರತೆಯನ್ನು ಎದುರಿಸಬೇಕಾಗುತ್ತದೆ. ಶಾಸನಗಳು ಇಂತಹ ಕೊರತೆಯನ್ನು ಬಹಳಷ್ಟು ನೀಗಿಸಿವೆ. ಇವುಗಳಲ್ಲಿ ದೊರಕುವ ಮಾಹಿತಿಗಳನ್ನು ಆಧರಿಸಿ ಸ್ಥಳೀಯವಾದಂತಹ ಇತಿಹಾಸದ ರಚನೆಯು ಒಂದು ಮಹತ್ವಪೂರ್ಣ ಕಾರ್ಯವಾಗುವುದರ ಜೊತೆಗೆ ಒಂದು ಭೂ ಪ್ರದೇಶವು ಒಂದು ವಿಶಾಲವಾದ ಸಾಮ್ರಾಜ್ಯದ ಅಭಿವೃದ್ಧಿಯಲ್ಲಿ ಹೇಗೆ ತನ್ನ ಇರುವಿಕೆಯನ್ನು ಗುರುತಿಸಿಕೊಂಡಿದೆ. ಹಾಗೆಯೇ ಇದು ಸ್ಥಳೀಯ ಅಥವಾ ಕೆಳಸ್ತರದ ಇತಿಹಾಸಕ್ಕೆ ಒಂದು ಮಹತ್ವದ ಕೊಡುಗೆಯೇ ಆಗುತ್ತದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ.

---

[1].**ಸಂಶೋಧಕರು,ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ,ಮಾನಸಗಂಗೋತ್ರಿ, ಮೈಸೂರು.**

ಹೊಯ್ಸಳ ದೊರೆಗಳ ಆಳ್ವಿಕೆಯು ಮುಗಿದ ಅನಂತರದಲ್ಲಿ ಅಸ್ಥಿತ್ವಕ್ಕೆ ಬಂದಂತಹ ಸಾಮ್ರಾಜ್ಯ ವಿಜಯನಗರ ಸಾಮ್ರಾಜ್ಯ ಹೊಯ್ಸಳ ಮೂರನೆಯ ಬಲ್ಲಾಳ ಮತ್ತು ವಿಜಯನಗರದ ಸಂಗಮ ವಂಶದ ಹರಿಹರನಿಗೆ ಸಂಬಂಧವಿದ್ದ ವಿಷಯ ಈಗಾಗಲೇ ಸ್ಪಷ್ಟವಾಗಿದೆ. ಹರಿಹರನ ಮಗಳನ್ನು ಹೊಯ್ಸಳ ಬಲ್ಲಾಳನ ಸಂಬಂಧಿ ಬಲ್ಲಪ್ಪ ದಣ್ಣಾಯಕ ಮದುವೆಯಾಗಿದ್ದನು ಎಂಬುದು ತಿಳಿದುಬರುತ್ತದೆ. ಈ ಮೊದಲಿಗೆ ಬಲ್ಲಾಳನ ಅಧೀನನಾಗಿ ಆಳುತ್ತಿದ್ದ ಹರಿಹರನೇ ಸಂಗಮ ವಂಶದ ಮೂಲಪುರುಷ ಎಂದು ತಿಳಿಯಲಾಗಿದೆ. ಹರಿಹರನು ತನ್ನ ತಮ್ಮಂದಿರಲ್ಲಿ ಒಬ್ಬನಾದ ಮಾರಪನನ್ನು 'ಮಲೆ ರಾಜ್ಯ' ಎಂದು ಕರೆಯಲಾಗುತ್ತಿದ್ದ ಆರಗ ರಾಜ್ಯದ ರಾಜ್ಯಪಾಲನನ್ನಾಗಿ ನೇಮಿಸಿದ. ಆರಗವೇ ಅವನ ರಾಜಧಾನಿಯಾಯಿತು.

ಚಟ್ಟಕೊಡಗಿ ಗ್ರಾಮದ ಜವುಗುಭೂಮಿಯಲ್ಲುರುವ ಕ್ರಿ.ಶ. ನವೆಂಬರ್ 16, 1346ರಲ್ಲಿ ಬರೆಸಿರುವ ಈ ಕಲ್ಲು ಶಾಸನ ಸಂಖ್ಯೆ– 145ರ ಪ್ರಕಾರ; ಶ್ರೀವೀರ ಹರಿಯಪ್ಪ ಒಡೆಯನನ್ನು ಶ್ರೀಮನ್ಮಹಾಮಂಡಲೇಶ್ವರ ಪೂರ್ವ – ಪಶ್ಚಿಮ – ದಕ್ಷಿಣ ಸಮುದ್ರಾಧಿಪತಿ ಎಂದೇ ಸಂಬೋಧಿಸಿದೆ. ಇದು ನರಸಿಂಹ ದೇವರಿಗೆ ನೈವೇದ್ಯಾದಿ ಸೇವೆಗಾಗಿ ಏಳು ಗದ್ಯಾಣಗಳನ್ನು ಮತ್ತು ಭೂ ದಾನ ನೀಡಿರುವ ಬಗೆಗೆ ವಿವರವನ್ನು ಉಲ್ಲೇಖಿಸುತ್ತದೆ.[1] ವಿರೂಪಾಪುರ ಗ್ರಾಮದ ಕೊಲ್ಲಾಭಟ್ಟರಲ್ಲಿದ್ದ ಕ್ರಿ.ಶ. ಜೂನ್ 11, 1394ರಲ್ಲಿ ರಚಿಸಿರುವ ಈ ತಾಮ್ರ ಶಾಸನ ಸಂಖ್ಯೆ – 221ರ ಪ್ರಕಾರ; ಈ ಶಾಸನವು ನಾಗರಿ ಭಾಷೆಯಲ್ಲಿ ರಚಿಸಿರುವ ಎರಡನೆ ಹರಿಹರ, ಬುಕ್ಕನ ಮಗ ಮತ್ತು ಗೌರಂಬಿಕಾ ಇನ್ನಿತರ ವಿಜಯನಗರ ಅರಸರ ವಂಶಾವಳಿಯ ಬಗೆಗೆ ಉಲ್ಲೇಖಿಸುತ್ತದೆ.[2] ಇದು ಯದುಕುಲದಲ್ಲಿ ಜನಿಸಿದ ಸಂಗಮ ಭೂಪಾಲನಿಗೆ ಐದು ಜನ ಗಂಡುಮಕ್ಕಳು. ಅವರೆಂದರೆ ಹರಿಹರ ಕಂಪರಾಯ, ಬುಕ್ಕ, ಮಾರಪ ಹಾಗೂ ಮುದ್ದಪ. ಇವರಲ್ಲಿ ಪಾಂಡವರಲ್ಲಿನ ಅರ್ಜುನನಂತೆ ಪ್ರಖ್ಯಾತನಾದವನು ಬುಕ್ಕ. ಬಕ್ಕನನ್ನು ಇಲ್ಲಿ ಆಡಂಬರದ ಮಾತುಗಳಲ್ಲಿ ಹೊಗಳಲಾಗಿದೆ.

ಕವಲೇದುರ್ಗದ ಕೋಟೆಯಲ್ಲಿ ಕಾಶೀಶ್ವರ ದೇವಾಲಯದ ಮುಂದಿರುವ ದೊಡ್ಡ ಬಂಡೆಯ ಮೇಲೆ ದೊರೆಕಿರುವ ಸರಿಸುಮಾರು ಕ್ರಿ.ಶ. 1362ರಲ್ಲಿ ಬರೆಸಿರುವ ಈ ಶಾಸನ ಸಂಖ್ಯೆ – 36ರ ಪ್ರಕಾರ: ಬುಕ್ಕರಾಯನ ಮಗ ವಿರೂಪಾಕ್ಷರಾಯನು ಆರಗ ರಾಜ್ಯವನ್ನು ಆಳುತ್ತಿದ್ದಂತೆ ತಿಳಿದಿದೆ. ಹಾಗೆಯೇ ವೀರಬಕ್ಕಣವೊಡೆಯನ ಮಗನಾದ ವಂದಗಿರಿ ವಿರುಪಣ್ಣವೊಡೆಯನು ಇದೇ ಕಾಲಘಟ್ಟದಲ್ಲಿ ಅರಗ ರಾಜ್ಯದ ಪಾಲಕನಾಗಿದ್ದನು ಎಂದು ದಾಖಲಿಸಿದೆ.[3] ಬೆಟ್ಟಮಕ್ಕಿಯ ಮಠದಗದ್ದೆಯಲ್ಲಿರುವ ಹುಟ್ಟುಗುಂಡಿನ ಮೇಲೆ ಕ್ರಿ.ಶ. ಡಿಸೆಂಬರ್, 1362 ರಿಂದ ಜನವರಿ, 1393ರಲ್ಲಿನ ಈ ಶಾಸನ ಸಂಖ್ಯೆ – 187ರ ಪ್ರಕಾರ; ಬುಕ್ಕರಾಜನನ್ನು ಪ್ರತಾಪ ಚಕ್ರೇಶ್ವರ ಎಂದು ಸಂಬೋಧಿಸಲಾಗಿದೆ. ಅವನ ಮಗನಾದ ವಿರುಪಣವೊಡೆಯನು ಈತನ ಹೆಸರಿನಲ್ಲಿ ವಿರೂಪಾಕ್ಷಪುರವೆಂಬ ಅಗ್ರಹಾರವನ್ನು ಸ್ಥಾಪಿಸಿ ಅಲ್ಲಿ

ಬ್ರಾಹ್ಮಣರಿಗೆ ಭೂಮಿಯನ್ನು, ಕೂಡ ದಾನವಾಗಿ ನೀಡಿದನು. ತಿಳಿಸುತ್ತದೆ.[4] ಕಣವೆ ಗ್ರಾಮದ ಕಲ್ಲು ಬಸ್ತಿಯ ಒಳಗಿದ್ದ ಕ್ರಿ.ಶ ಜನವರಿ 21ನೇ, 1363ರಲ್ಲಿ ಬರೆಸಿರುವ ಈ ಕಲ್ಲು ಶಾಸನ ಸಂಖ್ಯೆ – 31ರಲ್ಲಿ ಸಮುದ್ರತ್ರಯಾಧೀಶ್ವರ ಶ್ರೀಸಂಗಮೇಶ್ವರ ಕುಮಾರ ಶ್ರೀವೀರ ಬುಕ್ಕಮಹಾರಾಯರ ಉಲ್ಲೇಖವಿದೆ. ಅವನ ಮಗ ವಿರುಪಣ ಒಡೆಯ ಮಲೆರಾಜ್ಯವನ್ನು ಆಳುತ್ತಿದ್ದಾಗ ಹೆದ್ದೂರ ನಾಡಿನಲ್ಲಿ ಜೈನ ಸೂರಿಗಳ ಹಾಗೂ ಆಚಾರ್ಯರ ನಡುವೆ ದೇವಸ್ವದ ಗಡಿಯ ವಿಚಾರದಲ್ಲಿ ವಿವಾದ ಉದ್ಭವಿಸಿತು. ಮಹಾ ಪ್ರಧಾನ ನಾಗಣ್ಣ ಮತ್ತು ಇತರರ ಪ್ರವೇಶದಿಂದಾಗಿ ಈ ವಿವಾದ ಸೌಹಾರ್ದಯುತವಾಗಿ ಪರಿಹರಿಸಲ್ಪಟ್ಟಿತು ಎಂಬುದಾಗಿ ಉಲ್ಲೇಖಿಸುತ್ತದೆ.[5] ಭೋಗಾರಕೊಪ್ಪದ ಮಂಗರಸಕೊಡಿಗೆ ಕಾಡಿನಲ್ಲಿರುವ ಕ್ರಿ.ಶ. ಆಗಸ್ಟ್ 17, 1384ರಲ್ಲಿ ರಚಿಸಿರುವ ಈ ಶಾಸನ ಸಂಖ್ಯೆ – 195ರಲ್ಲಿ ಮಾಧವ ಮಂತ್ರಿ ಮತ್ತು ವೀರಬುಕ್ಕರನ್ನು ಉಲ್ಲೇಖಿಸುತ್ತದೆ. ಈತ ಮೊದಲು ಯುವರಾಜ ಮಾರಪನ ಮಂತ್ರಿಯಾಗಿದ್ದ ಅನಂತರ ಬುಕ್ಕನ ಹಾಗೂ ಎರಡನೆಯ ಹರಿಹರನ ಕೈಕೆಳಗೆ ಬನವಾಸಿಯ ರಾಜ್ಯಪಾಲನಾಗಿದ್ದನು ಹಾಗೂ 'ಸೂತಸಂಹಿತೆ'ಯ ಮೇಲಿನ ವ್ಯಾಖ್ಯಾನ ರಚನಕಾರನಾಗಿದ್ದ ಈ ಮಾಧವಮಂತ್ರಿಯೂ ಮಲೆ ರಾಜ್ಯದಲ್ಲಿದ್ದ.[6]

ವಿರೂಪಾಪುರದ ಕೊಲ್ಲಾಭಟ್ಟರಲ್ಲಿದ್ದ ಸರಿಸುಮಾರು ಕ್ರಿ.ಶ ಜೂನ್ 11, 1394ರಲ್ಲಿ ಬರೆಸಿರುವ ಈ ತಾಮ್ರ ಶಾಸನ ಸಂಖ್ಯೆ–221ರಲ್ಲಿ ಎರಡನೆ ಹರಿಹರನ ಕಾಲಘಟ್ಟಕ್ಕೆ ಸೇರಿದ್ದು, ಇದು ನಾಗರಿ ಲಿಪಿಯಲ್ಲದೆ. ಹಾಗೆಯೇ, ಇದು ಹರಿಹರನು ಬುಕ್ಕರಾಯ ಮತ್ತು ಗೌರಾಂಬಿಕೆಯರ ಮಗನು ಎಂಬುದನ್ನು, ಇವನು ಶ್ರೀರಂಗಪಟ್ಟಣ ರಾಜ್ಯಕ್ಕೆ ಸೇರಿದ ತುಂಗಭದ್ರ ದೇಶದ ವಿರೂಪಾಪುರವನ್ನು ಅದರ ಉಪಗ್ರಾಮಗಳ ಸಹಿತ ವಿರೂಪಾಕ್ಷನ ಸನ್ನಿಧಿಯಲ್ಲಿ ವಿವಿಧ ವೃತ್ತಿಯ ಬ್ರಾಹ್ಮಣರಿಗೆ ದಾನ ನೀಡಿದ್ದನ್ನು ಸಹ ಉಲ್ಲೇಖಿಸಿರುತ್ತದೆ. ಹಾಗೆಯೇ, ಸರಿಸುಮಾರು ಕ್ರಿ.ಶ.1394ರಲ್ಲಿ ಸೋವಣ್ಣ ಒಡೆಯ ಎಂಬುವನ್ನು ಆರಗ ರಾಜ್ಯವನ್ನು ಪಾಲಿಸುತ್ತಿದ್ದವನು ಎಂಬುದನ್ನು ಸಹ ಇದೇ ಶಾಸನವೂ ಸಾದರಪಡಿಸುತ್ತದೆ.[7] ಹಾಗೆಯೇ, ಇದೇ ವಿರುಪಾಪುರದ ಕೊಲ್ಲಾಭಟ್ಟರಲ್ಲಿದ್ದ ಸರಿಸುಮಾರು ಕ್ರಿ.ಶ. ಫೆಬ್ರವರಿ 5, 1702ರಲ್ಲಿ ರಚಿಸಿರುವ ಒಂದನೆಯ ತಾಮ್ರ ಶಾಸನ ಸಂಖ್ಯೆ–220ರಲ್ಲಿ ಕೆಳದಿಯ ಚನ್ನಮ್ಮಾಜಿ ಅವರ ಮಗ ಬಸವಪ್ಪ ನಾಯಕನು ಈ ಸ್ರವಣ ಎಂಬುವನಿಗೆ ಭೂಮಿಯನ್ನು ದಾನವಾಗಿ ಮತ್ತು ಅದರ ಮೌಲ್ಯವನ್ನು 627 ವರಹಗಳು ಮತ್ತು ಒಂದು ಹಣ ಎಂದು ನಿರ್ಧರಿಸಿ ನೀಡಿರುವುದು ಉಲ್ಲೇಖಿತಗೊಂಡಿರುತ್ತದೆ.[8] ಬಿಕ್ಕಹಳ್ಳಿಯ ಜಮೀನೊಂದರಲ್ಲಿರುವ ಸರಿಸುಮಾರು ಕ್ರಿ.ಶ ಫೆಬ್ರವರಿ 1, 1401ರಲ್ಲಿ ಬರೆಸಿರುವ ಈ ಕಲ್ಲು ಶಾಸನ ಸಂಖ್ಯೆ–183ರಲ್ಲಿ ವಿಜಯ ನಗರದ ಎರಡನೆಯ ಹರಿಹರನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ. ಹಾಗೆಯೇ, ಜನ್ನರಸ ಒಡೆಯ ಆರಗ ರಾಜ್ಯವನ್ನು ಪಾಲಿಸುತ್ತಿದ್ದವನು. ಬಿಕ್ಕಹಳ್ಳಿಯ ಭೂಮಿಯನ್ನು ಬೊಮ್ಮೆಗಡೆಗೆ ಮಾರಾಟ ಮಾಡಲಾಗಿತ್ತು. ಆದರೆ, ದಾಮೋದರ ನಾಯಕನ ಮಗ ಕೇಸಪ್ಪನಿಗೆ ಬಿಕ್ಕಹಳ್ಳಿಯಲ್ಲಿ ನೀಡಿದ ಭೂಮಿ ವ್ಯವಹಾರದ

ಬಗೆಗಿನ ಕ್ರಯಪತ್ರ ಇದಾಗಿದೆ. ಇದನ್ನು ಸಿಂಗಣ್ಣ ನಾಡ – ಸೇನಬೋವ ಎಂಬುವನ್ನು ಈ ದಾಖಲೆಯನ್ನು ಬರೆದಿದ್ದಾರೆ. ಇದು ಕೆಲವು ವಾರಗಳ ಅನಂತರ ಇದೇ ರಾಜ್ಯಪಾಲನು ತೀರ್ಥಮತ್ತೂರು ಮಠದ ಜ್ಞಾನೇಂದ್ರ ಭಾರತಿಗಳ ಯಿತಿಭಿಕ್ಷೆಗಾಗಿ ದೊರೆ ಎರಡನೆಯ ಹರಿಹರನು ನೀಡಿದ ದಾನವನ್ನು ನಿರೂಪಿಸುವ ಶಾಸನವನ್ನು ಬರೆಸಿದನು. ಆ ಗುರುವಿಗೆ ನಾಡವರೂ ದಾನ ನೀಡಿರುವುದು ದಾಖಲಾಗಿರುತ್ತದೆ.[9]

ಮುಕ್ತಹರಿಹರಪುರದ ಹರಿಹರೇಶ್ವರ ದೇವಾಲಯದ ಮುಂದೆ ನೆಟ್ಟಿರುವ ಸರಿಸುಮಾರು ಕ್ರಿ.ಶ. ಸೆಪ್ಟೆಂಬರ್ 15, 1404ರಲ್ಲಿ ಬರಸಿರುವ ಈ ಕಲ್ಲು ಶಾಸನ ಸಂಖ್ಯೆ–205ರಲ್ಲಿ ಇಮ್ಮಡಿ ಹರಿಹರ ಮತ್ತು ಅವನ ಮಂತ್ರಿ ವಿಠ್ಠಣ್ಣನನ್ನು ಪ್ರಶಂಸಿಸುವ ವಿವರವಿದೆ. ಹಾಗೆಯೇ ಇದೇ ಎರಡನೆಯ ಹರಿಹರನಿಗೆ ನಿರ್ವಾಣ ಪ್ರಾಪ್ತಿಯಾದುದನ್ನು ಕೂಡ ತಿಳಿಸುತ್ತದೆ. ಇದೇ ಕಾಲಘಟ್ಟದಲ್ಲಿ ವಿಠ್ಠಣ್ಣವೊಡೆಯನು ಆರಗ ರಾಜ್ಯವನ್ನು ಪಾಲಿಸುತ್ತಿದ್ದನು. ಆವಾಗ ಈತನು ಅರಸ ಎರಡನೆ ಹರಿಹರನ ನೆನಪಿನಲ್ಲಿ ಮುಕ್ತ ಹರಿಹರಪುರ ಅಗ್ರಹಾರವನ್ನು ಸ್ಥಾಪಿಸಿದನು ಎಂಬುದಾಗಿ ತಿಳಿಸುತ್ತದೆ.[10] ಸರಿಸುಮಾರು ಕ್ರಿ.ಶ.1403 ರಿಂದ 1418ರವರೆಗೆ ಆರಗ ರಾಜ್ಯದ ಅಧಿಕಾರವನ್ನು ವಿಠ್ಠಣ್ಣವೊಡೆಯನ್ನು ನಡೆಸಿರುತ್ತಾನೆ. ಕ್ರಿಯಾಶಕ್ತಿಯೇ ಅವನ ಗುರುವಾಗಿದ್ದನು. ಆವಾಗ ಅರಗದ ವೆಂಠೆ ಮುದುವಂಕ ನಾಡನು ಬೆಲೂರು 28 ಮಹಾಜನರು ಎಂಬುದನ್ನು ಮುಕ್ತಹರಿಹರಪುರ ಎಂಬುದಾಗಿ ಹೆಸರಿಸಿರುವುದು ಕಂಡುಬರುತ್ತದೆ.

ಅಂದಿಗೆರೆಯ ಗದ್ದೆಯೊಂದರ ಬಳಿಯಲ್ಲಿರುವ ಸರಿಸುಮಾರು ಕ್ರಿ.ಶ ನವೆಂಬರ್ 29, 1404ರಲ್ಲಿ ರಚಿಸಿರುವ ಈ ಶಾಸನ ಸಂಖ್ಯೆ–01ರಲ್ಲಿ ಎರಡನೆಯ ಹರಿಹರನ ಮಗ ವಿರೂಪಾಕ್ಷನು ವಿಜಯನಗರ ಸಾಮ್ರಾಜ್ಯದಲ್ಲಿ ರಾಜ್ಯಭಾರ ಮಾಡುತ್ತಿದ್ದಾಗ, ಆರಗ ರಾಜ್ಯವು ಬೊಮ್ಮಣ್ಣವೊಡೆಯ ಮತ್ತು ವಿರುಪಾಂಬಿಕೆಯರ ಮಗನಾದ ವಿಠ್ಠಣ್ಣವೊಡೆಯನ ಪಾಲನೆಯಲ್ಲಿತ್ತು ಎಂದು ಉಲ್ಲೇಖೀಸುತ್ತದೆ.[11] ಹಾಗೆಯೆ, ಇದೇ ಆರಗ ರಾಜ್ಯದಲ್ಲಿ ವೇಂಠೆ ಮತ್ತು ಮುದುವಂಕ ನಾಡುಗಳ ಉಲ್ಲೇಖವಿದೆ. ಇದರಿಂದ ರಾಜ್ಯ ವೇಂಠೆ ಮತ್ತು ನಾಡು ಎಂಬ ವಿಭಾಗಗಳು ಅಸ್ತಿತ್ವದಲ್ಲಿದ್ದ ವಿಚಾರ ಸ್ಪಷ್ಟವಾಗುತ್ತದೆ. ನಾಗಲಪುರವನ್ನು ಕೊಬಡೆಗೆ ರಾವುನಾಡು ಎಂಬ ಅಗ್ರಹಾರವಾಗಿ ರಚಿಸಿ ಅನಂತರ ಕೇಶವದೇವ ಹೆಗ್ಗಡೆ ಅವರ ತಾಯಿ, ವೀರುಪಣ್ಣ ಮತ್ತು ಅವರ ಮಗ ಮಯಾಣ್ಣ ಮತ್ತು ಕೊಲ್ಲಪ್ಪ ಅವರಿಗೆ ದಾನವಾಗಿ ನೀಡಿರುವುದು ಕಂಡುಬರುತ್ತದೆ ಎಂದು ಹೇಳಬಹುದು. ಮಹಿಷಿ ವೊಕ್ಕಲುಕೊಪ್ಪದ ಗ್ರಾಮದೇವತೆ ಗುಡಿಯ ಹತ್ತಿರ ನೆಟ್ಟಿರುವ ಸರಿಸುಮಾರು ಕ್ರಿ.ಶ ಜನವರಿ 23, 1407ರಲ್ಲಿ ರಚಿಸಿರುವ ಈ ಶಾಸನ ಸಂಖ್ಯೆ–200ರಲ್ಲಿ ವಿಜಯನಗರದ ಅರಸನಾದಂತಹ ಒಂದನೆಯ ದೇವರಾಯ ಒಡೆಯನ ಆಳ್ವಿಕೆಯನ್ನು ಉಲ್ಲೇಖಿಸಿದೆ. ಇದು ಆನೆಯ ದಾಳಿಯಿಂದ ತನ್ನ ಜೀವನನ್ನು ಉಳಿಸಿದ ಬೊಮ್ಮಣ್ಣನಿಗೆ ತಿಪ್ಪಣ್ಣಯ್ಯನಿಂದ

ಉಂಬಳಿಯಾಗಿ ಭೂಮಿಯ ಮಾರಾಟದ ಮೌಲ್ಯದ 60 ಹಣವನ್ನು ದಾನವಿತ್ತ ವಿಷಯವನ್ನು ಅದು ದಾಖಲಿಸುತ್ತದೆ.[12] ಸೂರಳಿ ಗ್ರಾಮದಲ್ಲಿರುವ ಸರಿಸುಮಾರು ಕ್ರಿ.ಶ ಜೂನ್ 8, 1408ರಲ್ಲಿ ರಚಿಸಿರುವ ಶಾಸನ ಸಂಖ್ಯೆ–224ರ ಪ್ರಕಾರ; ವಿಜಯನಗರದ ಅರಸ ಒಂದನೆಯ ದೇವರಾಯನ ಬಗೆಗೆ, ಇದೇ ಕಾಲಘಟ್ಟದಲ್ಲಿ ಆರಗದ ಸಮಸ್ತ ಗೌಡ ಪ್ರಜೆಗಳಿಗೆ ಸುರಲಿ ಗ್ರಾಮವನ್ನು ನಾಗಸಮುದ್ರ ಅಗ್ರಹಾರವನ್ನಾಗಿ ರೂಪಿಸಿ ದಾನವಾಗಿ ನೀಡಿದರು ಎಂಬುದನ್ನು ಉಲ್ಲೇಖಿಸುತ್ತದೆ.[13] ತೀರ್ಥಮುತ್ತೂರು ಮಠದ ಅಂಗಳದಲ್ಲಿರುವ ಸರಿಸುಮಾರು ಕ್ರಿ.ಶ ಆಗಸ್ಟ್ 3, 1421ರಲ್ಲಿ ಬರೆಸಿರುವ ಶಾಸನ ಸಂಖ್ಯೆ–148ರ ಇದು ನಾಗರಿ ಲಿಪಿಯಲ್ಲಿದ್ದು, ವಿಜಯನಗರದ ಅರಸನಾದ ಒಂದನೆಯ ದೇವರಾಯನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ.[14] ಹಾಗೆಯೆ, ರಾಯದೇವನ ಮಗ ಬೊಮ್ಮಣ್ಣ, ಆತನ ಮಗ ಶ್ರೀಗಿರಿನಾಥನು ಅರಗ ವೆಂನ್ತೆಯ ಉಸ್ತುವಾರಿಯನ್ನು ವಹಿಸಿಸಿದ್ದನು ಎಂಬುದರ ಬಗೆಗೆ ವಿವರವನ್ನು ನೀಡುತ್ತದೆ.

ತೂದೂರು ಗ್ರಾಮದ ಮಂಜಪ್ಪ ಅವರಲ್ಲಿದ್ದ ಸರಿಸುಮಾರು ಕ್ರಿ.ಶ ಕ್ರಿ.ಶ. ಏಪ್ರಿಲ್ 21, 1445ರಲ್ಲಿ ಬರಸಿರುವ ಈ ಒಂಭತ್ತನೆಯ ತಾಮ್ರ ಶಾಸನ ಸಂಖ್ಯೆ–169 ನಾಗರಿ ಲಿಪಿಯಲ್ಲಿದ್ದು, ವಿಜಯನಗರದ ಅರಸನಾದ ಎರಡನೆಯ ದೇವರಾಯನ ಸಾಹಸ–ಸಿದ್ಧಿಗಳನ್ನು ವಿವರಿಸಿದೆ. ಮೇಣಂಗಿ ಗ್ರಾಮವನ್ನು ಅನಂತತೀರ್ಥ ಶ್ರೀಪಾದರಿಗೆ ದಾನವಿತ್ತ ವಿಷಯವನ್ನು, ಅನಂತರ ಇದು ಅರಗ ರಾಜ್ಯವನ್ನು ಅನಂತ ಎಂಬುವನ್ನು ನೋಡಿಕೊಳ್ಳುತ್ತಿದ್ದನು. ಆವಾಗ ಇದನ್ನು ನಿಡುಬಾಲ ನಾಡ ಲಕ್ಷ್ಮೀನಾರಾಯಣಪುರ ಎಂಬುದಾಗಿ ಮರುನಾಮಕರಣ ಮಾಡಲಾಗಿರುತ್ತದೆ. ಈ ಶಾಸನವನ್ನು ಮುದ್ದಣಚಾರ್ಯನ ಮಗ ವೀರಣ ಎಂಬುವನ್ನು ದಾಖಲೀಸಿರುವುದು ಕಂಡುಬರುತ್ತದೆ.[15] ಈ ಶಾಸನವು ಒಂದನೆಯ ಹಲಗೆಯ ಹಿಂಭಾಗ, ಎರಡನೆಯ ಹಲಗೆಯ ಹಿಂಭಾಗ, ಎರಡನೆಯ ಹಲಗೆಯ ಮುಂಭಾಗ ಮತ್ತು ಮೂರನೆಯ ಹಲಗೆಯ ಮುಂಭಾಗ ಎಂಬಂತಹ ವಿಭಾಗಗಳಲ್ಲಿ 69 ಸಾಲುಗಳ ವಿಷಯವನ್ನು ದಾಖಲೀಕರಿಸಲಾಗಿದೆ ಎಂದು ಹೇಳಬಹುದು. ತೀರ್ಥಹಳ್ಳಿ ಕೇಂದ್ರೀಯ ಪ್ರದೇಶದ ರಾಮಚಂದ್ರಾಪುರದ ಪುತ್ತಿಗೆ ಮಠದಲ್ಲಿದ್ದ ಸರಿಸುಮಾರು ಕ್ರಿ.ಶ ಏಪ್ರಿಲ್ 29, 1463ರಲ್ಲಿ ರಚಿಸಿರುವ ಈ ಶಾಸನ ಸಂಖ್ಯೆ–155ರ ಪ್ರಕಾರ; ಇದು ನಾಗರಿ ಲಿಪಿಯಲ್ಲಿದ್ದು, ವಿಜಯನಗರದ ಅಸರನಾಗಿರುವಂತಹ ಇಮ್ಮಡಿ ದೇವರಾಯ ಎಂದು ಕರೆಸಿಕೊಂಡ ಮಲ್ಲಿಕಾರ್ಜುನನ ಕಾಲಘಟ್ಟಕ್ಕೆ ಸೇರಿರುತ್ತದೆ ಎಂಬುದು ತಿಳಿದುಬರುತ್ತದೆ. ಹಾಗೆಯೆ, ಇದು ಮಲ್ಲಿಕಾರ್ಜುನ ಅವರನ್ನು ಒಳಗೊಂಡಂತೆಯೇ ವಿಜಯನಗರ ಅರಸರ ವಂಶಾವಳಿಯನ್ನು ತಿಳಿಸುತ್ತದೆ ಹಾಗೂ ಆವಾಗ ಶ್ರೀಗಿರಿನಾಥನ ಮಗ ದೇವಪ್ಪ ದಂಡನಾಥನಿಗೆ ಗಜಬೇಟೆ ದೇವರಾಯಪುರವೆಂಬ ಪ್ರತಿನಾಮ ಪಡೆದಿದ್ದ ಸರಬಳಿಗೆ ಗ್ರಾಮವನ್ನು ಅದರ ಉಪಗ್ರಾಮಗಳನ್ನು ದಾನವಾಗಿ ನೀಡಿರುವುದು. ಇದೇ ಕಾಲಘಟ್ಟದಲ್ಲಿ ಈತನು ಆರಗ ರಾಜ್ಯವನ್ನು ಪಾಲಿಸುತ್ತಿದ್ದನು. ಈ ದಾನಕ್ಕೆ ಕಾರಣ ತನ್ನ ಮಗನಿಗೆ

ದೇವರಾಯನೆಂದು ನಾಮಕರಣೋತ್ಸವ ಮಾಡಿದನು. ಗ್ರಾಮವನ್ನು ಸ್ವೀಕರಿಸಿದ ದೇವಪ್ಪನು ಅದನ್ನು ಅಗ್ರಹಾರವನ್ನಾಗಿ ಮಾಡಿ ಬ್ರಾಹ್ಮಣರಿಗೆ ದಾನ ನೀಡಿದನು ಎಂಬುದು ಉಲ್ಲೇಖಿಸುತ್ತದೆ.[16] ಈ ಶಾಸನವು ಒಂದನೆಯ ಹಲಗೆಯ ಹಿಂಭಾಗ, ಎರಡನೆಯ ಹಲಗೆಯ ಮುಂಭಾಗ, ಎರಡನೆಯ ಹಲಗೆಯ ಹಿಂಭಾಗ, ಮೂರನೆಯ ಹಲಗೆಯ ಮುಂಭಾಗ, ಮೂರನೆಯ ಹಲಗೆಯ ಹಿಂಭಾಗ, ನಾಲ್ಕನೆಯ ಹಲಗೆಯ ಮುಂಭಾಗ, ನಾಲ್ಕನೆಯ ಹಲಗೆಯ ಹಿಂಭಾಗ, ಐದನೆಯ ಹಲಗೆಯ ಮುಂಭಾಗ ಹೀಗೆ ವಿಭಾಗಿಸಿಕೊಂಡು 162 ಸಾಲುಗಳಿಂದ ರಚಿತವಾಗಿರುತ್ತದೆ ಎಂದು ಹೇಳಬಹುದು.

ಅಂದಿಗೆರೆ ಗ್ರಾಮದ ಗದ್ದೆಯೊಂದರ ಬಳಿಯಲ್ಲಿರುವ ಸರಿಸುಮಾರು ಕ್ರಿ.ಶ ನವೆಂಬರ್ 29, 1404ರಲ್ಲಿ ರಚಿಸಿರುವ ಈ ಕಲ್ಲು ಶಾಸನ ಸಂಖ್ಯೆ–01ರ ಪ್ರಕಾರ; ವಿಜಯನಗರದ ಎರಡನೆ ಹರಿಹರನ ಮಗ ವಿರೂಪಕ್ಷನ ಆಳ್ವಿಕೆಗೆ ಸಂಧಿಸಿದ್ದಾಗಿರುತ್ತದೆ.[17] ಹಾಗೆಯೇ, ಇದು ಅರಗದ ಕಾಳಿನಾಥ ದೇವರಿಗೆ ಮೂರು ನಗರಗಳು ಅಥವಾ ನಾಡುಗಳನ್ನು ದಾನ ನೀಡಿರುವ ವಿಷಯವನ್ನು ಉಲ್ಲೇಖಿಸಿರುತ್ತದೆ. ಅತ್ತಿಗಾರು ಗ್ರಾಮದ ರಥೆಮಕ್ಕಿಯಲ್ಲಿ ಬಿದ್ದರುವ ಸರಿಸುಮಾರು ಕ್ರಿ.ಶ ಜನವರಿ 11, 1377ರಲ್ಲಿ ಬರೆಸಿರುವ ಈ ಕಲ್ಲು ಶಾಸನ ಸಂಖ್ಯೆ–06ರಲ್ಲಿ ವಿಜಯನಗರದ ಬುಕ್ಕರಾಯನ ಮಗ ವಿರುಪಣ್ಣ – ವಡೆಯರ್ ಅವರು ತಮ್ಮ ಆಳ್ವಿಕೆಯಲ್ಲಿ ಇದೇ ಗ್ರಾಮದ ಬೀಹ ಅರಸನ ಮಗನಾದ ಗೋಂವಿದೇವನಿಗೆ ಭೂಮಿಯನ್ನು ದಾನವಾಗಿ ನೀಡಿರುವ ಅಂಶವು ಉಲ್ಲೇಖಿತಗೊಂಡಿರುತ್ತದೆ.[18]

ಆರಗ ಗ್ರಾಮದ ವೀರಭದ್ರ ದೇವಸ್ಥಾನದ ಪ್ರಾಕಾರದಲ್ಲಿರುವ ಸರಿಸುಮಾರು ಕ್ರಿ.ಶ ಕ್ರಿ.ಶ ಸೆಪ್ಟೆಂಬರ್ 26, 1352ರಲ್ಲಿ ಬರೆಸಿರುವ ಈ ವೀರಗಲ್ಲು ಶಾಸನ ಸಂಖ್ಯೆ–24ರಲ್ಲಿ ವಿಜಯನಗರದ ಅರಸರಾದ ಒಂದನೆಯ ಹರಿಹರನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ.[19] ಕಣಿವೆಯ ಕಲ್ಲುಬಸ್ತಿಯ ಒಳಗಿದ್ದ ಸರಿಸುಮಾರು ಕ್ರಿ.ಶ ಜನವರಿ 21, 1363ರಲ್ಲಿ ರಚಿಸಿರುವ ಈ ಶಾಸನ ಸಂಖ್ಯೆ–29ರಲ್ಲಿ ವಿಜಯನಗರದ ಅರಸ ಬುಕ್ಕನ ಆಳ್ವಿಕೆಯ ಕಾಲಘಟ್ಟವನ್ನು ಸೂಚಿಸುತ್ತದೆ.[20] ಹಾಗೆಯೇ, ವಿರೂಪಣ್ಣ ವಡೆಯ ಎಂಬುವನು ಮಲೆ ರಾಜ್ಯದಲ್ಲಿ ಆಡಳಿತಗಾರನಾಗಿದ್ದನು ಎಂಬುದನ್ನು ಉಲ್ಲೇಖಿಸುತ್ತದೆ.

ಕಬ್ಬಗಲ್ಲು ವಿರಕ್ತಮಠದ ಹೊಲದ ಬಳಿಯ ನೆಟ್ಟಿರುವ ಸರಿಸುಮಾರು ಕ್ರಿ.ಶ. ನವೆಂಬರ್ 12, 1368ರಲ್ಲಿ ಬರೆಸಿರುವ ಈ ಶಾಸನ ಸಂಖ್ಯೆ–32ರಲ್ಲಿ ಆರಗ ನಗರವನ್ನು ವಿರೂಪಣ್ಣ ವಡೆಯ ಎಂಬುವನು ಪಾಲಿಸುತ್ತಿದ್ದನು.[21] ಆವಾಗ ರಾಜರು ಅಲ್ಲಿನ ವಿನಾಯಕ ದೇವರ ದಿನನಿತ್ಯ ಕೈಂಕಾರ್ಯಗಳಿಗೆ ಮತ್ತು ಪಡಿಗೆ ಖಜ್ಜಾಯದ ಆರೋಗಣೆಗೆ ಭೂಮಿಯನ್ನು ದಾನವಾಗಿ ಬಿಟ್ಟಿರುವುದು. ಹಾಗೆಯೇ, ಮುಧುವಂಕನಾಡು ವಿಷಯವಾಗಿ ದಾನವಾಗಿ ಬಿಟ್ಟಿರುವ ವಿಷಯವನ್ನು ಈ ಶಾಸನವು ದಾಖಲಿಸಿರುತ್ತದೆ ಎಂದು ಹೇಳಬಹುದು. ಕಲ್ಲಾಳು ಗ್ರಾಮಸ್ಥರೊಬ್ಬರ ತೋಟದಲ್ಲಿ ನೆಟ್ಟರುವ ಸರಿಸುಮಾರು ಕ್ರಿ.ಶ

ಅಕ್ಟೋಬರ್ 11, 1369ರಲ್ಲಿ ಬರೆಸಿರುವ ಈ ಕಲ್ಲು ಶಾಸನ ಸಂಖ್ಯೆ–35ರಪ್ರಕಾರ; ವಿಜಯನಗರದ ಅರಸ ಹರಿರಾಯರ ಮಹಾಮಂಡಲೇಶ್ವರನಾಗಿದ್ದ ವೀರಮಾರಪ್ಪ ವಡೆಯನ ಮಗನಾದ ಸೋಮಣ್ಣ ವಡೆಯನಿಗೆ ಮುದುವಂಕನಾಡಿನ ಜೆಗಟಿಗಾರೆಯ ಬೆದಲು ಭೂಮಿಯನ್ನು ಹರಿಗೋತ್ರದ ನಾರಣ ಭಟ್ಟರ ಮಗನಾದ ದೇವಣ್ಣ ಭಟ್ಟರಿಗೆ ದಾನ ನೀಡಿರುವುದನ್ನು ಉಲ್ಲೇಖಿಸಲಾಗಿದೆ.[22] ಬೆಕ್ಕೆಕೆಂಜೆಗುಡ್ಡೆಯ ಹಿಡುವಳಿ ಕಾಡೊಂದರಲ್ಲಿ ಬಿದ್ದರಿರುವ ಸರಿಸುಮಾರು ಕ್ರಿ.ಶ 1370ರಲ್ಲಿ ಬರೆಸಿರುವ ಶಾಸನ ಸಂಖ್ಯೆ–186ರಲ್ಲಿ ವಿಜಯನಗರದ ಅರಸರಾದ ಬುಕ್ಕರಾಯನ ಆಡಳಿತಕ್ಕೆ ಸಂಬಂಧಿಸಿರುತ್ತದೆ.[23] ಹಾಗೆಯೇ, ಇದು ಅರಸರ ರಾಜ್ಯದ ಅಭ್ಯದಯಕ್ಕಾಗಿಯೇ ಕೋದೂರ ನಾಗಣನಿಗೆ ರಾಮರಸವನ್ನು ಅಂದರೆ, ಹೆಗ್ಗರು ಗ್ರಾಮವನ್ನು ಗಾವುಡುಪ್ರಜೆಗಳಿಗೆ ಮತ್ತು ಇತರೆ 60 ಗ್ರಾಮಗಳಿಗೆ ದಾನವಾಗಿ ಬಿಟ್ಟಿರುವುದು ದಾಖಲಾಗಿರುತ್ತದೆ.

ಹೀಗೆ, ತೀರ್ಥಹಳ್ಳಿ ತಾಲೂಕು ಪ್ರದೇಶದಲ್ಲಿ ವಿಜಯನಗರದ ಅರಸರ ರಾಜಕೀಯ ಇತಿಹಾಸವನ್ನು ಲಭ್ಯವಿರುವ ಶಾಸನಗಳ ಆಧಾರದ ಮೇಲೆ ದಾಖಲಿಸಲಾಗಿದೆ. ಈ ಮೂಲಕ ಒಂದು ಪ್ರದೇಶವನ್ನು ಆಳಿರುವ ರಾಜಮನೆತನಗಳ ಇತಿಹಾಸವನ್ನು ಸಾಸರಪಡಿಸಲು ಶಾಸನಗಳು ಸಹ ಒಂದು ಮೂಲ ಆಧಾರವೇ ಆಗಿರುತ್ತದೆ ಎಂಬುದನ್ನು ಪ್ರಸ್ತುತ ಅಧ್ಯಯನದ ಮೂಲಕ ಹೊರತರಲಾಗಿದೆ.

**ಕೊನೆ ಟಿಪ್ಪಣಿಗಳು**

---

[1] .ಎಪಿಗ್ರಾಫಿಯ ಕರ್ನಾಟಿಕ, ಸಂಪುಟ–13, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2006,ತೀರ್ಥಹಳ್ಳಿ ತಾಲೂಕು, ಶಾಸನ ಸಂಖ್ಯೆ–145, ಪುಟ–415–416

[2]. ಅದೇ, ಶಾಸನ ಸಂಖ್ಯೆ–221, ಪುಟ–593–596

[3].ಅದೇ, ಶಾಸನ ಸಂಖ್ಯೆ–36, ಪುಟ–235

[4].ಅದೇ, ಶಾಸನ ಸಂಖ್ಯೆ–187, ಪುಟ–505–506

[5].ಎಪಿಗ್ರಾಫಿಯ ಕರ್ಣಾಟಿಕ, ಸಂಪುಟ–13,ತೀರ್ಥಹಳ್ಳಿ ತಾಲೂಕು,ಶಾಸನ ಸಂಖ್ಯೆ–29, ಪುಟ–227–229

[6].ಅದೇ,ಶಾಸನ ಸಂಖ್ಯೆ–195, ಪುಟ–531–532

[7].ಅದೇ, ಶಾಸನ ಸಂಖ್ಯೆ–221, ಪುಟ–593–599

[8].ಅದೇ, ಶಾಸನ ಸಂಖ್ಯೆ–120, ಪುಟ–585–592

[9].ಎಪಿಗ್ರಾಫಿಯ ಕರ್ನಾಟಿಕ,ಸಂಪುಟ–13,ತೀರ್ಥಹಳ್ಳಿ ತಾಲೂಕು, ಶಾಸನ ಸಂಖ್ಯೆ–183,ಪುಟ–501–502

[10].ಅದೇ, ಶಾಸನ ಸಂಖ್ಯೆ–205, ಪುಟ–547–553

[11].ಅದೇ, ಶಾಸನ ಸಂಖ್ಯೆ–1, ಪುಟ–187–197

[12].ಎಪಿಗ್ರಾಫಿಯ ಕರ್ನಾಟಿಕ,ಸಂಪುಟ–13,ತೀರ್ಥಹಳ್ಳಿ ತಾಲೂಕು, ಶಾಸನ ಸಂಖ್ಯೆ–200,ಪುಟ–536–541

[13]. ಅದೇ, ಶಾಸನ ಸಂಖ್ಯೆ–224, ಪುಟ–612–614

[14].ಅದೇ, ಶಾಸನ ಸಂಖ್ಯೆ–148, ಪುಟ–418–420

[15].ಅದೇ, ಶಾಸನ ಸಂಖ್ಯೆ–169, ಪುಟ–472–477

[16].ಎಪಿಗ್ರಾಫಿಯ ಕರ್ನಾಟಿಕ,ಸಂಪುಟ–13,ತೀರ್ಥಹಳ್ಳಿ ತಾಲೂಕು, ಶಾಸನ ಸಂಖ್ಯೆ–155,ಪುಟ–429–434

[17]. ಅದೇ, ಶಾಸನ ಸಂಖ್ಯೆ–01, ಪುಟ–187

[18].ಅದೇ, ಶಾಸನ ಸಂಖ್ಯೆ–06,ಪುಟ–203–204

[19]. ಅದೇ, ಶಾಸನ ಸಂಖ್ಯೆ–24, ಪುಟ–222

[20].ಎಪಿಗ್ರಾಫಿಯ ಕರ್ನಾಟಿಕ, ಸಂಪುಟ–13,ತೀರ್ಥಹಳ್ಳಿ ತಾಲೂಕು,ಶಾಸನ ಸಂಖ್ಯೆ–29,ಪುಟ–227–229

[21]. ಅದೇ, ಶಾಸನ ಸಂಖ್ಯೆ–32, ಪುಟ–230

[22]. ಅದೇ, ಶಾಸನ ಸಂಖ್ಯೆ–35, ಪುಟ–234

[23]. ಅದೇ, ಶಾಸನ ಸಂಖ್ಯೆ–186,ಪುಟ–504–505